ಇಂದು ದಿನಾಂಕಃ25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

<u>**ಪಾಟೀ ಸವಾಲುಃ**</u> ವಾದಿಯ ಪರ ಶ್ರೀ ಜಿ ವಿ ಕೆ ವಕೀಲರಿಂದಃ

ಪ್ರತಿವಾದಿ ಪತ್ರವನ್ನು ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಹಸ್ತ ನಕ್ಷೆಯನ್ನು ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಆಸ್ತಿಯ ಸರ್ವೆನಂ. 258 ಆಗಿರುತ್ತದೆ. ಸರ್ವೆನಂ. 260 ಕೆರೆಯ ಅಂಗಳ ಎಂದರೆ ಸರಿ. ನನ್ನ ಆಸ್ತಿಯ ಸಂಬಂದಪಟ್ಟಂತಹ ದಾಖಲೆಗಳಲ್ಲಿ ನೀರಾವರಿಯ ಮೂಲ (ಗುತ್ತಿ ಕಟ್ಟೆ) ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಡಿ-1 ಕಾಲಂ ನಂ.9 ಮತ್ತು 12(2) ರಲ್ಲಿ ಖರಾಬು ಗುತ್ತಿಕಟ್ಟೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಅದನ್ನು ಕರೆಯ ಗುತ್ತಿಕಟ್ಟೆ ಎಂದು ಕರೆಯುತ್ತೇವೆ ಎಂದು ನುಡಿದಿರುತ್ತಾರೆ. ನನ್ನ ಆಸ್ತಿಯ ಉತಾರದಲ್ಲಿ ಆ ರೀತಿ ಕೆರೆ ಮೂಲ ಎಂದು ನಮೂದಿಸಿಲ್ಲದಿದ್ದ ಕಾರಣದಿಂದ ನಾನು ನನ್ನ ಆಸ್ತಿಯ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ಗುತ್ತಿಕಟ್ಟೆ ಖರಾಬ ಎಂಬ ಆಸ್ತಿ ಸರಕಾರಿ ಆಸ್ತಿ ಎಂದರೆ ಸರಿ. ಸದರಿ ಗುತ್ತಿಕಟ್ಟೆ ಆಸ್ತಿಯ ಒಡ್ಡು 12 ರಿಂದ 13 ಫೂಟ್ ಅಗಲ ಇರುತ್ತದೆ ಎಂದರೆ ಸಾಕ್ಷಿಯು 4 ರಿಂದ 5 ಫೂಟ್ ಅಗಲ ಇರುತ್ತದೆ ಎಂದು ನುಡಿದಿರುತ್ತಾರೆ. ಆ ರೀತಿ ನಮೂದಾಗಿರುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ.

2. ಗುತ್ತಿಕಟ್ಟೆ ಖರಾಬು ಜಮೀನಿನ ಪೂರ್ವ ದಿಕ್ಕಿಗೆ ನಮ್ಮ ಜಮೀನುಗಳು ಇವೆ ಎಂದರೆ ಸರಿ. ಸದರಿ ಕಟ್ಟೆಗೆ ಹೊಂದಿ ಉತ್ತರ ದಿಕ್ಕಿಗೆ ಸರಕಾರಿ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯ ಮೂಲಕ ಅಲ್ಲಿ ಅಕ್ಕ ಪಕ್ಕದಲ್ಲಿ ಇರುವ ಜನರು ಸದರಿ ರಸ್ತೆಯ ಮೂಲಕವೇ ಓಡಾಡುತ್ತಾರೆ ಎಂದರೆ ಸರಿ. ವಾದಿಯರು ಚಿಕ್ಕೇರೂರ ರಸ್ತೆಯು ಮೂಲಕ ಬಂದು ನಮ್ಮ ಜಮೀನಿಗೆ ಹೊಂದಿಕೊಂಡಿರುವ ರಸ್ತೆಯ ಮಾರ್ಗವಾಗಿ ತಮ್ಮ ಜಮೀನುಗಳಿಗೆ ಹೋಗುತ್ತಾರೆ ಎಂದರೆ ಸರಿಯಲ್ಲ. ಸರ್ವೆನಂ.265 ಮತ್ತು 266 ವಾದಿಯರ ಆಸ್ತಿಗಳು ಎಂದರೆ ಸರಿ. ನಮ್ಮ ಜಮೀನಿಗೆ ಪಕ್ಕದಲ್ಲಿರುವಂತಹ ಕರೆ ಯಾವತ್ತು ತುಂಬುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ಕೆರೆ ಇರುವುದಿಲ್ಲ, ನಾನು ಕೆರೆ ಎಂದು ಹೇಳುವಂತಹ ಜಾಗ ಈಗ ಅಂಗಳ ಎಂದರೆ ಸರಿಯಲ್ಲ. ಸದರಿ ಕೆರೆಯಲ್ಲಿ ಸರಕಾರದವರು ಇವರೆಗೂ ಹೂಳನ್ನು ಎತ್ತಿಲ್ಲ ಎಂದರೆ ಸಾಕ್ಷಿಯು 3 ಸಲ ಎತ್ತಿರುತ್ತಾರೆ ಎಂದು ನುಡಿದಿರುತ್ತಾರೆ.

3. ಗುತ್ತಿಕಟ್ಟೆಯ ಕೆರೆಯ ಪಶ್ಚಿಮ ದಿಕ್ಕಿನಲ್ಲಿ ಕೂಡ ಆಸ್ತಿಗಳು ಇವೆ ಎಂದರೆ ಸರಿ. ಆ ರೀತಿ ಸದರಿ ಆಸ್ತಿಗಳಿಗೆ ಹೊಂದಿ ಪಶ್ಚಿಮ ದಿಕ್ಕಿಗೆ ಸರ್ವೆ ನಂ. 264 ಇರುತ್ತದೆ ಎಂದರೆ ಸರಿ. ಸರ್ವೆನಂ. 267

ಕ್ಕೆ ಹೊಂದಿ ಸರ್ವೆನಂ. 268 ಇದೆ ಎಂದರೆ ಸರಿ. ಸದರಿ ಆಸ್ತಿಯ ಉತ್ತರ ದಿಕ್ಕಿಗೆ 269 ಇರುತ್ತದೆ ಎಂದರೆ ಸರಿಯಲ್ಲ. ನನ್ನ ಆಸ್ತಿಗಳು ನನ್ನ ತಂದೆ ಖರೀದಿ ಮಾಡಿದ್ದು, ಆ ಮೂಲಕ ನನಗೆ ಬಂದಿರುತ್ತವೆ. ಆ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರಪಡಿಸಿಲ್ಲ ಎಂದರೆ ಸರಿ. ಸರ್ವೆನಂ. 268 ಅಸ್ತಿತ್ವದಲ್ಲಿ ಇದೆ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ನಾನು ನನ್ನ ಪ್ರತಿವಾದ ಪತ್ರದಲ್ಲಿ ನಮೂದಿಸಿರುವಂತೆ ರಿ ಸ.ನಂ. 260 ಕೆರೆಯ ಅಂಗಳದಲ್ಲಿ ನೀರು ತುಂಬಿದ್ದರಿಂದ ಅಲ್ಲಿ ಓಡಾಡಲು ಎತ್ತು, ಚಕ್ಕಡಿ, ಟ್ರಾಕ್ಟರ ತೆಗೆದುಕೊಂಡು ಓಡಾಡಲು ಬರಲಾಗದು. ಒಂದು ಪಕ್ಷ ವಾದಿ ರಸ್ತೆ ಗುಂಟ ಬಂದು 260 ರ ಮುಖಾಂತರ ತನ್ನ ಜಮೀನಿಗೆ ಬರುತ್ತಾನೆ ಎಂದು ಪ್ರತಿಪಾದಿಸಿದ್ದಲ್ಲಿ, ಕೆರೆಯ ಪಶ್ಚಿಮ ದಿಕ್ಕಿನ ಗುಂಟಾ ಏರಿ, G B C J ಗುಂಟಾ ಬರಲು ಅವಕಾಶ ಇದ್ದರೂ ಸಹ ಅಲ್ಲಿ ಹಕ್ಕು ಕೇಳಿಲ್ಲ ಎಂದು ನಾನು ನನ್ನ ವಕೀಲರಿಗೆ ಪ್ರತಿವಾದ ಪತ್ರದಲ್ಲಿ ನಮೂದಿಸಲು ಮಾಹಿತಿಯನ್ನು ನೀಡಿದ್ದೀರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಮೌನವಾಗಿ ನಿಂತಿರುತ್ತಾರೆ. ವಾದಿಗೆ ವಿವಾದಿತ ರಸ್ತೆಯಲ್ಲಿ ಓಡಾಡಬೇಡ ಎಂದು ಹೇಳಲು ನನಗೆ ಹಕ್ಕು ಇಲ್ಲ ಎಂದರೆ ಸಾಕ್ಷಿಯು ನಾನು ಅವರು ಓಡಾಡುವಾಗ ತಕರಾರು ಮಾಡಿರುವುದಿಲ್ಲ ಎಂದು ನಡಿದಿರುತ್ತಾರೆ.

4. ರಿ ಸ .ನಂ 264, 265, 266 ಆಸ್ತಿಗಳ ಮಾಲೀಕರು ಗುತ್ತಿಕಟ್ಟೆ ಕೆರೆಯಿಂದ ನೀರನ್ನು ಹಾಯಿಸಿಕೊಳ್ಳುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಅವರು ರಿ ಸ.ನಂ. 267 ರ ಕೆರೆಯಿಂದ ನೀರನು ಹಾಯಿಸಿಕೊಳ್ಳುತ್ತಾರೆ ಎಂದು ನುಡಿದಿರುತ್ತಾರೆ. ನಾವು ಕೆರೆ ನೀರನ್ನು ನಮ್ಮ ಜಮೀನಿಗೆ ಹಾಯಿಸಿಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿ. ಆ ರೀತಿ ದಾಖಲೆಗಳನ್ನು ಹಾಜರಪಡಿಸಲು ನನಗೆ ಹೃದಯದ ಸಮಸ್ಯ ಇದ್ದ ಕಾರಣದಿಂದ ನಾನು ದಾರವಾಡ ಆಸ್ಪತ್ರೆಗೆ ಹೋಗಿ ಅಲ್ಲಿ ಚಿಕಿತ್ಸೆ ಪಡೆಯುವ ಸಲುವಾಗಿ ಈಗ ದಾಖಲೆಗಳನ್ನು ಹಾಜರಪಡಿಸಲು ಸಾಧ್ಯವಾಗಿರುವುದಿಲ್ಲ ಎಂದು ನುಡಿದಿರುತ್ತಾರೆ. ಉಳಿದ ಪ್ರತಿವಾದಿಯರು ದಾಖಲೆಗಳನ್ನು ಹಾಜರಪಡಿಸಬಹುದಿತ್ತು ಎಂದರೆ, ಸಾಕ್ಷಿಯು ಅವರಿಗೆ ಅಷ್ಟು ಮಾಹಿತಿ ಇಲ್ಲ ಎಂದು ನುಡಿದಿರುತ್ತಾರೆ. ಇತರೆ ಪ್ರತಿವಾದಿಯರ ಆಸ್ತಿಗಳ ದಾಖಲೆಗಳನ್ನು ನಾವು ಹಾಜರಪಡಿಸಿರುವುದಿಲ್ಲ. ಈವರೆಗೂ ನಾನು ಸಾಕ್ಷ ನುಡಿದ ವಿಚಾರ ನನ್ನ ವೈಯುಕ್ತಿಕ ಅಭಿಪ್ರಾಯ ಎಂದರೆ ಎಲ್ಲಾ ಪ್ರತಿವಾದಿಯರದ್ದು ಎಂದು ನುಡಿದಿರುತ್ತಾರೆ.

5. ವಾದಿ ಮತ್ತು ನಾನು ಚಿಕ್ಕೇರೂರನಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ವಿವಾದಿತ ರಸ್ತೆಯನ್ನು ದುರಸ್ತಿ ಮಾಡುವ ಸಲಮಾಗಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನ ಅಡಿಯಲ್ಲಿ ಕ್ರಿಯಾ ಯೋಜನೆ (Action Plan) ಮಾಡಿರುತ್ತಾರೆ ಎಂದರೆ ಸರಿ. ವಾದಿಯರು ವಿವಾದಿತ ರಸ್ತೆಯ ಮೂಲಕ ಟ್ರಾಕ್ಟರ, ಚಕ್ಕಡಿಗಳಲ್ಲಿ ತಮ್ಮ ಆಸ್ತಿಗಳಿಗೆ ಓಡಾಡುತ್ತಾರ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿಯರೆಲ್ಲರೂ ಸೇರಿ ವಾದಿ ಬಳಕೆ ಮಾಡಿಕೊಳ್ಳತ್ತಿದ್ದಂತಹ ರಸ್ತೆಗೆ ತಕರಾರು

ಮಾಡಿದ ಕಾರಣದಿಂದ ವಾದಿ ಈ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿಯಲ್ಲ.

6. ಕುಂತಿಗುಡ್ಡ ದಿಂದ ವಾದಿಯರ ಆಸ್ತಿಗಳಿಗೆ ಹೋಗಲು ಯಾವುದೇ ದಾರಿ ಅಸ್ತಿತ್ವದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ಕುಟುಂಬಗಳು ಬೇರೆ ಬೇರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಓ ಹೇ ಕೇ ಸರಿ ಇದೆ.

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.